JANUARY 03, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಇಂದು, 'ಅಕ್ಷರದ ಅವ್ವ' ಎಂದೇ ಖ್ಯಾತರಾದ, ಸಾವಿತ್ರಿಬಾಯಿ ಫುಲೆ ಅವರ ಜನ್ಮ ದಿನ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಶ್ರದ್ಧಾ ಸುಮನ ಅರ್ಪಿಸಿ, ಜ್ಞಾನ, ಕರುಣೆ ಮತ್ತು ಅಚಲ ಧೈರ್ಯದಿಂದ, ಜಾತಿ ಮತ್ತು ಲಿಂಗ ಸರಪಳಿಗಳನ್ನು ಪ್ರಶ್ನಿಸಿ, ಭಾರತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಮೊದಲ ದೀಪವನ್ನು ಬೆಳಗಿಸಿದ, ನಿರ್ಭೀತ ಕಲಿಕೆಯ ಜ್ವಾಲೆಯಾಗಿ, ಸಾವಿತ್ರಿಬಾಯಿ ಫುಲೆ ಅವರನ್ನು, ಜಯಂತಿಯಂದು, ದೇಶ ಸ್ಮರಿಸಲಿದೆ ಎಂದಿದ್ದಾರೆ.

<><><>

ವಿಜಯಪುರ ಜಿಲ್ಲೆ, ತಿಕೋಟಾ ತಾಲೂಕು, ಕೋಟ್ಯಾಳ ಗ್ರಾಮದ ಸರ್ಕಾರಿ ಶಾಲೆಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿ ವೇಗದಿಂದ ಮುಂದುವರಿದಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ, ತಿಳಿಸಿದ್ದಾರೆ. ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಫೌಂಡೇಶನ್ನಿನ, ಕಾರ್ಪೋರೆಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಯೋಜನೆ ಅಡಿ, 10 ತರಗತಿ ಕೊಠಡಿಗಳು, ಶೌಚಾಲಯ, ಗ್ರಂಥಾಲಯ ಹಾಗೂ ಬಿಸಿಯೂಟ ಪಾಕಶಾಲೆಯನ್ನು, ಗ್ರಾಮೀಣ ಮಕ್ಕಳ ಕಲಿಕೆ ಸುಗಮಗೊಳಿಸಲು, ಆಧುನಿಕ ಸೌಕರ್ಯಗಳೊಂದಿಗೆ ನಿರ್ಮಿಸಲಾಗುತ್ತಿದೆ ಎಂದರು.

<><><>

ನ್ಯುಮೋನಿಯಾ ಶ್ವಾಶಕೋಶದ ಸೋಂಕು ರೋಗವಾಗಿದ್ದು, ಮಕ್ಕಳನ್ನು ಹೆಚ್ಚು ಬಾಧಿಸುತ್ತದೆ. ಕಳೆದ ನವೆಂಬರ್ 12 ರಿಂದ ಬರುವ ಫೆಬ್ರವರಿ 28ರ ವರೆಗೆ, ನ್ಯುಮೋನಿಯಾ ಕುರಿತು, ಸಮುದಾಯದಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು, ಚಿತ್ರದುರ್ಗ ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ, ಬಿ.ಮೂಗಪ್ಪ ತಿಳಿಸಿದ್ದಾರೆ. ಚಿತ್ರದುರ್ಗ ತಾಲೂಕು, ಭರಮಸಾಗರದ ಇಂದಿರಾ ನಗರದಲ್ಲಿ, ತಾಯಂದಿರಿಗೆ, ನ್ಯುಮೋನಿಯಾ ಜಾಗೃತಿ ಸಭೆಯಲ್ಲಿ ಮಾತನಾಡಿದರು. ಮಗುವಿಗೆ ಜ್ವರ, ಹಸಿವು ಇಲ್ಲದಿರುವುದು, ಕೆಮ್ಮು ಮತ್ತು ರಕ್ತ ಮಿಶ್ರಿತ ಹಳದಿ ಕಫ ಇವು ರೋಗಲಕ್ಷಣಗಳು. ಸರಿಯಾದ ಸಮಯಕ್ಕೆ ಚುಚ್ಚುಮದ್ದು ಹಾಕಿಸಿ, ತಾಯಿಯ ಎದೆ ಹಾಲನ್ನು ನೀಡಿದಲ್ಲಿ, ಸೋಂಕು ಬಾರದಂತೆ ತಡೆಯಬಹುದು ಎಂದರು.

<><><>

ಬೆಂಗಳೂರು ಉತ್ತರ ತಾಲೂಕು, ಯಲಹಂಕ ಸಮೀಪದ, ಮಾದಪ್ಪನಹಳ್ಳಿಯ 153 ಎಕರೆ ಪ್ರದೇಶದಲ್ಲಿ, ವಿಶ್ವಗುರು ಬಸವಣ್ಣ ಜೀವವೈವಿಧ್ಯ ಉದ್ಯಾನವನ್ನು, ಅರಣ್ಯ ಇಲಾಖೆ ಅಭಿವೃದ್ಧಿ ಪಡಿಸಲಿದೆ ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ತಿಳಿಸಿದ್ದಾರೆ.

ಸಚಿವ ಸಂಪುಟ ಅನುಮೋದಿಸಿದ್ದು, ನಗರಕ್ಕೆ ಅತ್ಯಗತ್ಯವಾದ, ಶ್ವಾಸತಾಣ ಹಾಗೂ ಮನೋಲ್ಲಾಸ ಕೇಂದ್ರವಾಗಿ, ಉದ್ಯಾನವನ್ನು ಅಭಿವೃದ್ಧಿಪಡಿಸಲು, 50 ಕೋಟಿ ರೂಪಾಯಿ ಅನುದಾನ ಮಂಜೂರಾಗಿದೆ. 1760 ರಲ್ಲಿ ಲಾಲ್‌ಬಾಗ್ ಹಾಗೂ 1870ರಲ್ಲಿ ಕಬ್ಬನ್ ಪಾರ್ಕ್ ನಿರ್ಮಾಣಗೊಂಡು, ಒಂದೂವರೆ ಶತಮಾನಗಳ ಬಳಿಕ ಮತ್ತೊಂದು ಬೃಹತ್ ಉದ್ಯಾನ ರೂಪುಗೊಳ್ಳುತ್ತಿದೆ ಎಂದು, ಸಚಿವರು ಹರ್ಷ ವ್ಯಕ್ತ ಪಡಿಸಿದ್ದಾರೆ.

<><><>

ಕಲಬುರಗಿ ಜಿಲ್ಲೆ, ಸೇಡಂ ಪುರಸಭೆಯನ್ನು, ನಗರಸಭೆಯನ್ನಾಗಿ ಘೋಷಿಸಿ, ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ, ತಿಳಿಸಿದ್ದಾರೆ. ಸೇಡಂ ತಾಲೂಕಿನ, ಬಟಗೇರಾ (ಬಿ) ಪಂಚಾಯಿತಿ ಹಾಗೂ ಬಟಗೇರಾ (ಕೆ) ಗ್ರಾಮಗಳು, ಸೇಡಂ ನಗರಸಭೆ ವ್ಯಾಪ್ತಿಗೆ ಸೇರಲಿದ್ದು, ಮಹತ್ವದ ಮೈಲುಗಲ್ಲಾಗಿದೆ. ಸೇಡಂನ ಸಮಗ್ರ ಅಭಿವೃದ್ಧಿ ತಮ್ಮ ಆದ್ಯತೆಯಾಗಿದೆ ಎಂದು, ಎಕ್ಸ್ ಮಾಧ್ಯಮದಲ್ಲಿ ಹೇಳಿದ್ದಾರೆ.

<><><>

ವಿಕಸಿತ ಭಾರತ 2047; ಜಿ ರಾಮ್ ಜಿ ಯೋಜನೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ದೂರದೃಷ್ಟಿಯ ಯೋಜನೆ. ಗ್ರಾಮೀಣ ಭಾರತದ ಆರ್ಥಿಕತೆಯನ್ನು ಬಲಪಡಿಸಿ, ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡುತ್ತಿದೆ ಎಂದು, ರಾಜ್ಯಸಭೆ ಸಂಸದ, ಬೆಳಗಾವಿಯ ಈರಣ್ಣ ಕಡಾಡಿ ತಿಳಿಸಿದ್ದಾರೆ. ವಿಕಸಿತ ಭಾರತ; ರೋಜ್‌ಗಾರ್ ಮತ್ತು ಅಜೀವಿಕಾ ಮಿ ನ್ ಕಾಯ್ದೆ, ಪಾರದರ್ಶಕ ಮತ್ತು ವೇಗದ ಅನುಷ್ಠಾನವನ್ನು ತಂತ್ರಜ್ಞಾನದ ಮೂಲಕ ಖಾತ್ರಿ ಪಡಿಸಿ, ಕಾರ್ಮಿಕರಿಗೆ ಸಕಾಲಿಕ ಲಾಭವನ್ನು ತಲುಪಿಸಲಿದೆ ಎಂದರು.

<><><>

ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಸೀತಾರಾಮ ತಾಂಡಾದ, ಕೂಲಿ ಕಾರ್ಮಿಕ, ಶಿವು ನಾಯಕ, ವಿ.ಬಿ.; ಜಿ ರಾಮ್ ಜಿ ಕುರಿತು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶಿವು ನಾಯಕ ಧ್ವನಿ 25 ಸೆಕೆಂಡುಗಳು

<><><>

ವಿಕಸಿತ ಭಾರತ; ರೋಜ್‌ಗಾರ್ ಮತ್ತು ಅಜೀವಿಕಾ ಮಿ ನ್, ಗ್ರಾಮೀಣ ಯೋಜನೆ ಅಡಿ, ಪ್ರಸಕ್ತ ವರ್ಷಕ್ಕೆ, 86 ಸಾವಿರ ಕೋಟಿ ರೂಪಾಯಿ ಕೇಂದ್ರ ಮೀಸಲಿರಿಸಿದೆ. ಶಾಸನಬದ್ಧ 125 ದಿನಗಳ ಕೂಲಿ ಕೆಲಸ ಹಾಗೂ ಏಳು ದಿನಗಳಲ್ಲಿ ಕೂಲಿ ಪಾವತಿ ಖಾತ್ರಿ ಪಡಿಸಿದೆ. ಪಂಚಾಯಿತಿ ಮಟ್ಟದಲ್ಲಿ, ಜಲ ಸುರಕ್ಷತೆ ಮತ್ತು ಹವಾಮಾನ ನಿರ್ವಹಣೆ ಸ್ವತ್ತುಗಳ ನಿರ್ಮಿತಿ, ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜೀವನೋಪಾಯಕ್ಕೆ ಸಂಬಂಧಿಸಿದ, ಕಾಮಗಾರಿಗಳನ್ನು ಯೋಜಿಸಿ, ಅನುಷ್ಠಾನಗೊಳಿಸಬಹುದು.

<><><>

ಹೊಸ ದಿಲ್ಲಿಯ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಷನ್, ಪಿ.ಎಚ್.ಡಿ. ಅಧ್ಯಯನ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. 60 ವ ಗಳ ಶೈಕ್ಷಣಿಕ ಪ್ರಯಾಣದಲ್ಲಿ, ಐತಿಹಾಸಿಕ ಮೈಲುಗಲ್ಲು ಎಂದು, ಐ.ಐ.ಎಂ.ಸಿ. ತಿಳಿಸಿದ್ದು, 2025–26ನೇ ಶೈಕ್ಷಣಿಕ ವ ಕ್ಕೆ, ಪ್ರವೇಶಾತಿಗಾಗಿ ಸಂಶೋಧಕರನ್ನು ಆಯ್ಕೆ ಮಾಡಲಾಗುತ್ತಿದೆ. ಪೂರ್ಣ ಮತ್ತು ಅರೆಕಾಲಿಕ ಸಂಶೋಧಕರು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು, ಜನವರಿ 30 ಕೊನೆಯ ದಿನ ಎಂದು, ಮಾಹಿತಿ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ.

<><><>

ಬೆಳಗಾವಿ ಜಿಲ್ಲೆ, ನಿಪ್ಪಾಣಿ ತಾಲೂಕು, ತವಂದಿ ಗ್ರಾಮದಲ್ಲಿ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ, 20 ಲಕ್ಷ ರೂಪಾಯಿ ವೆಚ್ಚದಲ್ಲಿ, ವಿಶ್ರಾಂತ ಸೈನಿಕರ ಭವನ ನಿರ್ಮಾಣ ಕಾಮಗಾರಿಗೆ, ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಚಾಲನೆ

ನೀಡಿದರು. ದೇಶ ರಕ್ಷಣೆಗಾಗಿ, ಅಮೂಲ್ಯ ಸೇವೆ ಸಲ್ಲಿಸಿದ, ಸೈನಿಕರ ಗೌರವ ಮತ್ತು ಸೌಲಭ್ಯಗಳನ್ನು ಇನ್ನ ್ಟ ಬಲಪಡಿಸುವ ಮಹತ್ವದ ಕಾರ್ಯವಿದು ಎಂದು, ಸಂಸದೆ ಪ್ರಿಯಾಂಕಾ ತಿಳಿಸಿದರು.

<><><>

ರಸ್ತೆ ಬಳಸುವ ಪ್ರತಿಯೊಬ್ಬರ ಜೀವ, ಸುರಕ್ಷಿತ ಸಂಚಾರದಲ್ಲಿ ಅಡಗಿದ್ದು, ಜಾಗರೂಕರಾಗಿ ವಾಹನ ಚಲಾಯಿಸುವಂತೆ, ಬಳ್ಳಾರಿ ಜಿಲ್ಲೆ, ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ ಹೊಸಮನೆ ಮನವಿ ಮಾಡಿದ್ದಾರೆ. ಪ್ರಾದೇಶಿಕ ಸಾರಿಗೆ ಇಲಾಖೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಆಯೋಜಿಸಿದ್ದ, 37ನೇ ರಸ್ತೆ ಸುರಕ್ಷತಾ ಮಾಸಾಚರಣೆ ಉದ್ಘಾಟಿಸಿ ಮಾತನಾಡಿದರು. ಸಾರ್ವಜನಿಕರಲ್ಲಿ ರಸ್ತೆ ಸುರಕ್ಷತಾ ನಿಯಮಗಳ ಕುರಿತು, ಅರಿವು ಮೂಡಿಸಲು ಜನವರಿ ಮಾಸಾದ್ಯಂತ, ಜಿಲ್ಲೆಯಲ್ಲಿ ವಿಶೇಷ ಕಾರ್ಯಕ್ರಮಗಳು ನಡೆಯಲಿವೆ ಎಂದರು.

<><><>

ಗ್ರಾಮದಲ್ಲಿ ಕುಡಿಯುವ ನೀರು, ನೈರ್ಮಲ್ಯ, ಘನ ತ್ಯಾಜ್ಯ ವಿಲೇವಾರಿ ಕುರಿತು, ದೂರುಗಳಿದ್ದಲ್ಲಿ, ಪಂಚಮಿತ್ರ ಸಹಾಯವಾಣಿ, 82775 0600ಗೆ ಕರೆ ಮಾಡಿ ಅಥವಾ ವಾಟ್ಸಾಪ್ ಮೂಲಕ ದೂರು ಸಲ್ಲಿಸಿ ಎಂದು, ಗ್ರಾಮೀಣಾಭಿವೃದ್ಧಿ ಇಲಾಖೆ, ಕೋರಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.